Submersion Of Lands Under Gundal Project

532. Sri R. RACHE GOWDA (Hanur):—

Will the Minister for Revenue be pleased to state.—

(*a*) the extent of patta land that is going to be submerged in Gundal Project of Kollegal Tauk ;

(*b*) wether compensation has been paid to the land holder whose lands whould be submerged ;

(*c*) if not, the reason therefor ?

Sri N. HUTCHAMASTHY GOWDA (Minister for Revenue).—

(*a*) 882 acres and 81 cents.

(*b*) Crop compensation has been paid.

(*c*) Compensation amount has not been paid as acquisition proceedings have not been completed.

ಶ್ರೀ ಆರ್. ರಾಚೇಗೌಡ.—ಸ್ವಾಮಿ ನನ್ನ (ಇ) ಪ್ರಶ್ನೆಗೆ ಉತ್ತರವಾಗಿ ಅಕ್ವಿಜಿಷನ್ ನಡೆಯಲಿಕ್ಕೆ ಮುಳುಗಡೆಗಳು ಪೂರ್ಣವಾಗದೆ ಇರುವ ಕಾರಣ ಜಮೀನು ಪರಿಹಾರ ಕೊಟ್ಟಿಲ್ಲ ಎಂದು ಹೇಳಿದ್ದೀರಿ, ಇದು ಎಷ್ಟು ದಿನಗಳಲ್ಲಿ ಅಕ್ವಿಜಿಷನ್ ಪ್ರೊಸೀಡಿಂಗ್ಸ್ ಆಗುತ್ತದೆ ? ಮತ್ತು ಆ ಮುಳುಗಡೆ ಆಗಿರುವ ಜಮೀನಿನ ಮಾಲೀಕರಿಗೆ ಎಷ್ಟು ದಿವಸಗಳಲ್ಲಿ ಪರಿಹಾರವನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ ?

† ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅಲ್ಲರತಕ್ಕ ಒಟ್ಟು ಭೂಮಿ ಎಂದರೆ ಮುಳುಗಡೆ ಆಗಿರುವ ಜಮೀನು 882 ಎಕರೆ 81 ಸೆಂಟು. ಇದರಲ್ಲಿ 506 ಎಕರೆ 65 ಸೆಂಟ್ ಭೂಮಿಗೆ 8-8-72 ರಲ್ಲಿ ಫೈನರ್ ನೋಟೀಫಿಕೇಷನ್ ಆಗಿದೆ. ಅದಕ್ಕೆ ಆದಷ್ಟು ಜಾಗ್ರತೆ ಅವಾರ್ಡ್ ಪಾಸುಮಾಡಿ ಪರಿಹಾರವನ್ನು ಕೊಡುತ್ತೇವೆ. ಇನ್ನು ಉಳಿದ 376 ಎಕರೆ 16 ಸೆಂಟ್ ಜಮೀನಿಗೆ ಇಷ್ಟರಲ್ಲೇ ಪ್ರಿಲಿಮಿನರಿ ನೋಟಿಫಿಕೇಷನ್ ಆಗುವ ಸಂದರ್ಭ ಇದೆ. ಆದಷ್ಟು ಜಾಗ್ರತೆ ಅದರ ಅಕ್ವಿಜಿಕೆಷನ್ ಪ್ರೊಸೀಡಿಂಗ್ಸ್ ಪೂರ್ತಿ ಮಾಡಿ ಪರಿಹಾರ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ.—ಅಲ್ಲಿ ಸುಮಾರ 200 ಸಂಸಾರಗಳು 882 ಎಕರೆ 81 ಸೆಂಟ್ ಜಮೀನನ್ನು ಕಳೆದುಕೊಂಡಿದ್ದಾರೆ. ಅವರಿಗೆ ಇನ್ನೂ ಪರಿಹಾರ ಸಿಕ್ಕಿಲ್ಲ. ಇಂಥಾ ಪ್ರಾಜಕ್ಟ್‌ಗಳನ್ನು ಕಟ್ಟುವಾಗ ಅದರಲ್ಲಿ ಮುಳಗಡೆ ಆಗತಕ್ಕವರಿಗೆ ಬೇರೆ ಕಡೆ ರಿಹ್ಯಾಬಿಲಿಟೇಟ್ ಮಾಡುವ ವ್ಯವಸ್ಥೆಯನ್ನು ಸರ್ಕಾರದವರು ಮಾಡಬೇಕಾಗುತ್ತದೆ. ಈ ದೃಷ್ಟಿಯಿಂದ ಅಲ್ಲರತಕ್ಕ ಫಾರೆಸ್ಟ್ ಜಮೀನಿನಲ್ಲಿ ಒಂದು ಕಾಲನಿ ಮಾಡಿ ಅವರನ್ನು ಪುನರ್ವಸತಿ ಮಾಡಬೇಕೆಂದು ಅಲ್ಲ ಮುಳುಗಡೆಯಾಗಲ್ಲಿರುವ ಜಮೀನಿನ ಮಾಲೀಕರು ಸರ್ಕಾರಕ್ಕೆ ಮನವಿಯನ್ನು ಕೊಟ್ಟಿಲ್ಲವೇ ? ಆ ಮನವಿಯನ್ನು ತಾವು ಪರಿಶೀಲನೆ ಮಾಡಿ ಅವರಿಗೆ ಇರತಕ್ಕ ಕಷ್ಟವನ್ನು ನಿವಾರಣೆ ಮಾಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸಾಮಾನ್ಯವಾಗಿ ಜಮೀನು ಕಳೆದುಕೊಂಡವರಿಗೆ ಪುನರ್ ವಸತಿ ಮಾಡಬೇಕು, ಜಮೀನು ಕೊಡಬೇಕು ಎಂದು ಸರ್ಕಾರದ ನೀತಿಯೇನೂ ಇಲ್ಲ. ಅಲ್ಲಿ ಯಾರು ಯಾರು ಪೂರ್ಣವಾಗಿ ಜಮೀನು ಕಳೆದುಕೊಳ್ಳುತ್ತಾರೆ ಅಂಥವರಿಗೆ ಪುನರ್ವಸತಿ ಮಾಡಬೇಕಾಗುತ್ತದೆ. ಇದರಲ್ಲಿ ಯಾರು ಯಾರು ಎಷ್ಟೆಷ್ಟು ಜಮೀನನ್ನು ಕಳೆದುಕೊಂಡಿದ್ದಾರೆ ಎಂಬುದನ್ನೆಲ್ಲಾ ನೋಡಿ, ಎಷ್ಟು ಜನ ಪೂರ್ಣವಾಗಿ ಜಮೀನು ಕಳೆದುಕೊಂಡಿದ್ದಾರೆ, ಅವರಿಗೆ ಎಲ್ಲಿ ಜಮೀನು ಕೊಡುವುದಕ್ಕೆ ಸಾಧ್ಯವಿದೆ ಎಂಬುದನ್ನು ಆಲೋಚನೆ ಮಾಡಿ ಮಾಡಬೇಕಾಗುತ್ತದೆ.

Sri B. B. SAYANAK.—Has it not come to the notice of the Government that if the Government is acquiring land for some tank or dam, the Government is paying compensation after six years. Will the Government take action to pay compensation promptly ?

MR. DEPUTY SPEAKER.—That is outside the scope of the main Question.

Fish Farm Scheme at Bhadravathi

564. Sri K. H. HANUME GOWDA (Hassan).—

Will the Minister of State for Fisheries be pleased to state.—

(*a*) the amount spent so far for Bhandra Fish Farm Scheme ;

(*b*) the number of Fishlets produced during the last three years and their total value ;

(*c*) the ranks of the Officers of Fisheries Department who are working under this Scheme and the amount spent towards their salary every year ;

(*d*) when the State will get full benefit of the Fish Farm and its Qnantum ?

Sri K. T. RATHOD (Minister of State for Fisheries).—

(*a*) Rs. 4.23 lakhs have been spent so far from the inception of Bhandra Fish Farm Scheme *i.e.* from 1965-66.

(*b*) 40500 Fishlets were produced during 1969-70 and its value was Rs. 4050; 1,18,500 Fishlets were produced during 1970-71 and its value was Rs. 11,850; 4,24,000 Fishlets were produced during 1971-72 and its value was Rs. 23,500.

(*c*) Only 3 Class III Officials were working under this scheme during 1965-66. The Staff was increased from 24-2-1972 and now One Class I Officer and 5 Class III Officials are working and an amount of Rs 31,800 is being spent towards their salary per year.

(*d*) Under the present financial position it cannot be said as to when the full benefit would be derived from this Fish Farm. Because this depends upon the amount made available for this scheme every year. After completion of this scheme, there will be an expenditure of about Rs. 10 lakhs per year and 5 crores of fishlets can be produced every year worth of Rs. 50 lakhs (estimate).

ಶ್ರೀ ಕೆ. ಎಚ್. ಹನುಮೇಗೌಡ.—ಈ ಸ್ಕೀಮಿನ ಅಂದಾಜು ಮೊಬಲಗು ಎಷ್ಟು ? ಕಳೆದ 4-5 ವರ್ಷಗಳಿಂದ ಎಷ್ಟು ಖರ್ಚಾಗಿದೆ ?

† ಕೆ. ಟಿ. ರಾಥೋಡ್.—ಮಾನ್ಯ ಸದಸ್ಯರಿಗೆ ಗೊತ್ತಿರುವಂತಹ ಈ ಸ್ಕೀಮಿನ ಅಂದಾಜು ಸುಮಾರು ಒಂದುವರೆ ಕೋಟಿಯಿಂದ ಎರಡು ಕೋಟಿ ರೂಪಾಯಿಗಳವರೆಗೆ ಇದೆ. ಇಷ್ಟರವರೆಗೆ ಎಷ್ಟು ಖರ್ಚಾಗಿದೆ ಎಂಬುದನ್ನು ಪ್ರಿಂಟೆಂಡ್ ಉತ್ತರದಲ್ಲಿ ಕೊಟ್ಟಿದೆ. ಈ ಸ್ಕೀಮನ್ನು ಪೂರ್ತಿಯಾಗಿ ಕಾರ್ಯಗತ ಮಾಡುವುದನ್ನು ಇಂತಿಷ್ಟೇ ವೇಳೆಯಲ್ಲಿ ಎಂದು ಹೇಳುವುದಕ್ಕಾಗುವುದಿಲ್ಲ ಏಕೆಂದರೆ ನಮಗೆ ಲಭ್ಯವಾಗುವಂತಹ ಹಣದ ಮೇಲೆ ಈ ಸ್ಕೀಮಿನ ಪ್ರಗತಿ ಅವಲಂಬಿಸಿಕೊಂಡಿದೆ.